ಶ್ರೀಮತಿ ಮೋಟಮ್ಮ :- ತಾವು ಆದೇಶ ನೀಡಿದಿರಿ, ನಿಮ್ಮ ಆದೇಶದಂತೆ ನಡೆಯಬೇಕಾದುದು ಎಲ್ಲಾ ಸದಸ್ಯರ ಆದ್ಯ ಕರ್ತವ್ಯ. ಆದರೆ ನಿಮ್ಮ ಆದೇಶಕ್ಕೆ ತಲೆ ಬಾಗದೇ ಇದ್ದಾಗ ನೀವು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದನ್ನು ನಾವು ಯಾರೂ ತಮಗೆ ಹೇಳಬೇಕಾಗಿಲ್ಲ. ಅದ್ದರಿಂದ ತಾವು ಇದರ ಬಗ್ಗೆ ವಿಚಾರ ಮಾಡಬೇಕು. ಅನಾವಶ್ಯಕವಾಗಿ ಸಮಯವನ್ನು ಹಾಳು ಮಾಡುವುದರಲ್ಲಿ ಅರ್ಥವಿಲ್ಲ. ಈಗಾಗಲೇ ಸಾಕಷ್ಟು ಸಮಯ ಹಾಳು ಮಾಡಿದ್ದೇವೆ.

ಅಧ್ಯಕ್ಷರು :- ವಾಚ್ ಆ್ಯಂಡ್ ವಾರ್ಡ್‌ನವರಿಗೆ ಹೇಳಿ, ಆ ಪೇಯಿಂಟ್ ಮತ್ತು ಬ್ರಷ್ ಹೊರಗಡೆ ಇಡುವುದಕ್ಕೆ ಹೇಳುತ್ತೇನೆ.

ಶ್ರೀ ಬಿ. ಸ್ವಾಮಿರಾವ್ :- ತಮ್ಮ ಆಜ್ಞೆಯನ್ನು ಪಾಲಿಸದೇ ಇರುವುದರಿಂದ, ಅವರ ಮೇಲೆಯೂ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಅಧ್ಯಕ್ಷರು :- ತಾವು ಕುಳಿತುಕೊಳ್ಳಿ.

(ಮಾರ್ಷಲ್‌ರವರು ಬಂದು, ವಾಟಾಳ್ ನಾಗರಾಜ್‌ರವರ ಹತ್ತಿರ ಇದ್ದ ಪೆಯಿಂಟ್ ಡಬ್ಬ ಮತ್ತು ಬ್ರಷ್‌ಗಳನ್ನು ಹೊರಗಡೆ ತೆಗೆದುಕೊಂಡು ಹೋದರು.)

ಶ್ರೀ ವಾಟಾಳ್ ನಾಗರಾಜ್ :- ತಮ್ಮ ರಕ್ಷಣೆಗೆ ನಾವು ಬಂದಿದ್ದೇವೆ. ತಾವು ನನ್ನ ಎರಡು ಮಾತುಗಳನ್ನು ಕೇಳಲೇಬೇಕು. ತಮ್ಮ ರಕ್ಷಣೆಗೆ, ಪ್ರೊ: ನಂಜುಂಡಸ್ವಾಮಿಯವರು, ಬಾಬಾಗೌಡ ಪಾಟೀಲರು ಬಂದಿದ್ದರು. ನಿಮ್ಮಿಂದ ನಮಗೆ ರಕ್ಷಣೆ ದೊರಕಲಿಲ್ಲವೆಂದು ನಾವು ಅಂದುಕೊಂಡಿಲ್ಲ. ಆದರೆ ನಮಗೆ ರಕ್ಷಣೆ ಇಷ್ಟು ರೀತಿಯಲ್ಲಿ ದೊರಕಿದೆ ಎಂದು ನಾನು ಅಂದುಕೊಂಡಿಲ್ಲ. ನಾನು ಬಹಳ ನೋವಿನಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮತ್ತು ನಾವು ಮತ್ತೆ ಹೊರಗಡೆ ಹೋಗಬೇಕಾಗುತ್ತದೆ. ನಾವು ಮತ್ತೆ ಅದೇ ಕೆಲಸಕ್ಕೆ ಹೋಗುತ್ತಿದ್ದೇವೆ. ಅಂಗ್ಲ ಫಲಕಗಳಿಗೆ ಮಸಿ ಬಳಿಯುವುದಕ್ಕೆ ಹೋಗುತ್ತಿದ್ದೇವೆ. ತಾವು ನಮಗೆ ರಕ್ಷಣೆ ಕೊಡುವುದು ತಮಗೆ ಸೇರಿದುದು. ನಾವು ಇನ್ನೇನೂ ಮಾಡುವುದಕ್ಕಾಗುವುದಿಲ್ಲ. ನಾವು ಅತ್ಯಂತ ಕಳಕಳಿಯಿಂದ ಸವಿನಯದಿಂದ ಕೇಳಿದ್ದೇವೆ. ಈ ಸರ್ಕಾರದ ನಿರ್ಧಾರ ಏನು? ಸರ್ಕಾರ ಬದುಕಿದೆಯೇ? ಸತ್ತಿದೆಯೇ? ಹೇಳಿ, ಸರ್ಕಾರ ಏನು ಮಾಡುತ್ತಿದೆ ? ಇವತ್ತು ಆಡಳಿತ ಭಾಷೆ ಕನ್ನಡ ಎಂದು ಹೇಳಬೇಕಾದರೆ ಎಲ್ಲಿದೆ ಕನ್ನಡ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಮೂರನೇ ಮಹಡಿಯಲ್ಲಿರುವ ಇಂಗ್ಲೀಷ್ ಬೋರ್ಡುಗಳಿಗೆ ಡಾಂಬರು ಬಳಿಯುತ್ತೇವೆಂದು ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಹೇಳಿದ್ದಾರೆ. ಅದು ಏನಾಯಿತು ಸ್ವಾಮಿ?

ಅಧ್ಯಕ್ಷರು :- ಪ್ರಶ್ನೋತ್ತರ ವೇಳೆ ಮುಗಿಯಿತು ಮುಂದಿನ ವಿಷಯಕ್ಕೆ ಹೋಗೋಣ. ಈಗ ಗಮನ ಸೆಳೆಯುವ ಸೂಚನೆ.

ಶ್ರೀ ವಾಟಾಳ್ ನಾಗರಾಜ್ :- ನಾನು ಸಭಾತ್ಯಾಗ ಮಾಡುತ್ತೇನೆ ಸ್ವಾಮಿ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ :- ಅವರು ಒಂದು ಸ್ಟೇಟ್‌ಮೆಂಟ್ ಮಾಡುವುದಕ್ಕೆ ಹೇಳಿ ಅಧ್ಯಕ್ಷರೇ ? ಅವರು ಸ್ಟೇಟ್‌ಮೆಂಟ್ ಮಾಡುವುದಕ್ಕೆ ರೆಡಿಯಾಗಿದ್ದಾರೆ.

(ಶ್ರೀ ವಾಟಾಳ್ ನಾಗರಾಜ್ ಮತ್ತು ರೈತ ಸಂಘದ ಸದಸ್ಯರು ಸಭಾತ್ಯಾಗ ಮಾಡಿದರು)